**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 116/2020**

| | | |
|---|---|---|
| ಸಾಕ್ಷಿದಾರರ ಹೆಸರು | : **ನಂದ ಸಾಗರರಾಜೇ ಅರಸ್** | *ಪ್ರಮಾಣ ಮಾಡಿದ ದಿನಾಂಕ:* |
| ತಂದೆ ಹೆಸರು | : **ಸಾಗರರಾಜೇ ಅರಸ್** | **23.11.2022** |
| ವಯಸ್ಸು | : **27** ವರ್ಷ | |
| ವೃತ್ತಿ | : **ಖಾಸಗಿ ಉದ್ಯೋಗ** | **ಪಿಡಬ್ಲ್ಯೂ : 01** |
| ವಾಸ ಸ್ಥಳ | : **ಮೈಸೂರು** | **ಸಿಡಬ್ಲ್ಯೂ : 01** |

***ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ:***

**ನ್ಯಾಯಾಲಯದೆದುರು ಹಾಜರಿರುವ ಆರೋಪಿಗಳ ಪರಿಚಯ ಇದೆ. ಬಾಲಪರಾಧಿಗಳಾದ ಜೀವನಕುಮಾರ, ಅಭಿಜೀತ್ ಹಾಗೂ ಮದನ್ ಎನ್ನುವವರ ಪರಿಚಯ ಇಲ್ಲ. ಸುಮಂತ್‌ನನ್ನು ನೋಡಿದ್ದೇನೆ. ಚಾಸಾ-2, 3, 12 ರಿಂದ 14 ಗೊತ್ತು. ಮೃತ ಚಿನ್ನಸ್ವಾಮಿ ನನ್ನ ಸ್ನೇಹಿತ. ಆರೋಪಿಗಳು ನನ್ನ ಮನೆಯ ಅಕ್ಕಪಕ್ಕದಲ್ಲಿ ವಾಸ ಇದ್ದಾರೆ.**

**2. ದಿನಾಂಕ 11.02.2019ರಂದು ರಾತ್ರಿ 10:15ರ ವೇಳೆಗೆ ಚಿನ್ನಸ್ವಾಮಿ ನನಗೆ ಗಿರಿಯಾ ಬೋವಿ ಪಾಳ್ಯದ ಸ್ಮಶಾನದ ಬಳಿ ಇರುವ ಪೆಟ್ಟಿಗೆ ಅಂಗಡಿ ಬಳಿ ನನಗೆ ಸಿಕ್ಕಿದ್ದು, ಸಿಗರೇಟ್ ಕೊಡಿಸುವಂತೆ ಕೇಳಿದ್ದ, ನನ್ನ ಬಳಿ ಹಣ ಇಲ್ಲ ಎಂದು ಹೇಳಿ ಸಾಲ ಕೊಡಿಸುವುದಾಗಿ ಅಂಗಡಿ ಬಳಿ ಕರೆದುಕೊಂಡು ಹೋಗಿ ಸಿಗರೇಟ್ ಕೊಡಿಸಿದೆ. ನಂತರ ಮನೆಗೆ ಬರುವಂತೆ ಕರೆದಾಗ ನೀನು ಹೋಗಿ ಆಮೇಲೆ ಬರುತ್ತೇನೆ ಎಂದು ಹೇಳಿದ. ನಾನು ಹೊರಡುವಷ್ಟರಲ್ಲಿ ನನಗೆ ಫೋನ ಕರೆ ಬಂದಿದ್ದು, ಫೋನನಲ್ಲಿ ಮಾತನಾಡುತ್ತಾ ಸದರಿ ಅಂಗಡಿಯಿಂದ ಸುಮಾರು 100 ಮೀಟರ ಮುಂದೆ ಹೋಗುತ್ತಿರುವಾಗ, ನನಗೆ ಇನ್ನೊಂದು ಕರೆ ಬಂದಿತ್ತು. ಮೋಹನಕುಮಾರ ಎನ್ನುವವನು ಆಗ ಕರೆ ಮಾಡಿ ಚಿನ್ನಸ್ವಾಮಿ ಮುಖ್ಯ ರಸ್ತೆಯ ಪಕ್ಕದ ರಸ್ತೆಯಲ್ಲಿ ಬಿದ್ದು ಹೋಗಿದ್ದಾನೆ ಬಾ ಎಂದು ಹೇಳಿದ. ಅವನ ಮೂಗು, ಬಾಯಿಯಲ್ಲಿ ರಕ್ತ ಬರುತ್ತಿತ್ತು. ನಾನು ಸ್ಥಳಕ್ಕೆ ಹೋಗಿ ನೋಡಲಾಗಿ ಚಾಸಾ-14 ಮೋಹನಕುಮಾರ ಸ್ಥಳದಲ್ಲಿ ಇದ್ದು, ಚಿನ್ನಸ್ವಾಮಿ ರಸ್ತೆಯ ಪಕ್ಕದಲ್ಲಿ**

ಬಿದ್ದಿದ್ದು ಏದುಸಿರು ಬಿಡುತ್ತಿದ್ದ. ತಕ್ಷಣಕ್ಕೆ ಯಾರು ಅವನಿಗೆ ಹೊಡೆದಿದ್ದರು ಎನ್ನುವುದು ತಿಳಿಯ ಲಿಲ್ಲ. ಅಲ್ಲಿ ಆರೋಪಿಗಳು ಯಾರೂ ಇರಲಿಲ್ಲ. ಅಲ್ಲಿ ಅಂಗಡಿಯ ಬಳಿ ಕೂಡ ಆರೋಪಿಗಳನ್ನು ನೋಡಿರಲಿಲ್ಲ.

3. ನಂತರ ನಾನು ಮತ್ತು ಚಾಸಾ-14, ನನ್ನ ಬೈಕಿನಲ್ಲಿ ಚಿನ್ನಸ್ವಾಮಿಯನ್ನು ಆಸ್ಪತ್ರೆಗೆ ಕರೆದು ಕೊಂಡು ಹೋದೆವು. ಅಲ್ಲಿ ವೈದ್ಯರು ಪರಿಶೀಲಿಸಿ ಆಗಲೇ ಅವನು ಮೃತಪಟ್ಟಿರುವುದಾಗಿ ಹೇಳಿದರು. ನನಗೂ ಆರೋಪಿಗಳಿಗೂ ಯಾವುದೇ ಗಲಾಟೆ ಆಗಿರಲಿಲ್ಲ. ನಂತರ ನಾನು ಅದೇ ರಾತ್ರಿ ಪೊಲೀಸರಿಗೆ ದೂರು ಕೊಟ್ಟಿದ್ದೆ. ದೂರನ್ನು ನಿಪಿ-1 ಎಂದು, ಸಾಕ್ಷಿ ರುಜುವನ್ನು ನಿಪಿ-1(ಎ) ಎಂದು ಗುರುತಿಸಿದೆ. ದೂರು ಕೊಟ್ಟ ನಂತರ ಪೊಲೀಸರು ಚಿನ್ನಸ್ವಾಮಿ ಬಿದ್ದಿದ್ದ ಸ್ಥಳಕ್ಕೆ ಬಂದಿದ್ದರು. ನಾನು ಪೊಲೀಸರಿಗೆ ಘಟನೆಯ ವಿವರಗಳನ್ನು ಕೊಟ್ಟಿದ್ದೆ. ಮರುದಿನ ಸ್ಥಳದಲ್ಲಿ ಪೊಲೀಸರು ಮಹಜರ ಬರೆಯಲು ಬಂದಿದ್ದರು. ಅಲ್ಲಿ ಮಹಜರಗೆ ರುಜು ಮಾಡಿರುತ್ತೇನೆ. ಮಹಜರನ್ನು ನಿಪಿ-2 ಎಂದು, ಸಾಕ್ಷಿ ರುಜುವನ್ನು ನಿಪಿ-2(ಎ) ಎಂದು ಗುರುತಿಸಿದೆ. ಸ್ಥಳದಲ್ಲಿ ಬೀಯರ್ ಬಾಟಲ್ ಚೂರುಗಳನ್ನು ಮತ್ತು ರಕ್ತದ ಕಲೆಗಳು ಬಿದ್ದಿದ್ದು ಅವುಗಳನ್ನು ಪೊಲೀಸರು ಶೇಖರಿಸಿಕೊಂಡರು. ಮಹಜರಗೆ ಬೇರೆ ಯಾರು ರುಜು ಮಾಡಿದ್ದಾರೆ ಅಂತ ಗೊತ್ತಿಲ್ಲ. ಬೀಯರ್ ಬಾಟಲ್ ಚೂರುಗಳನ್ನು ಮು.ಮಾ-1 ಎಂದು ಗುರುತಿಸಿದೆ. ರಕ್ತದ ಕಲೆ ಗುರುತಿಸಲು ಆಗುವುದಿಲ್ಲ. ನಂತರ ಮರುದಿನ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

*(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೋಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)*

*ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-*

4. ಚಿನ್ನಸ್ವಾಮಿ ಅಂಗಡಿಯ ಬಳಿ ಬಿದ್ದಿದ್ದು ನಾನು ಸ್ಥಳಕ್ಕೆ ಹೋದಾಗ ಆರೋಪಿಗಳು ಎಲ್ಲರೂ ಅಲ್ಲಿಯೇ ಇದ್ದರು ಎಂದರೆ ಸರಿಯಲ್ಲ. ಆರೋಪಿಗಳು ಎಲ್ಲರೂ ನನಗೆ ಕೂಡ ಬೆದರಿಕೆ ಹಾಕಿ ಸ್ಥಳಕ್ಕೆ ಬಂದರೆ ನನ್ನನ್ನು ಸಾಯಿಸುವುದಾಗಿ ಹೇಳಿದರು ಎಂದರೆ ಸರಿಯಲ್ಲ. ನಾನು ಅದೇ ರೀತಿ ದೂರಿನಲ್ಲಿ ತಿಳಿಸಿದ್ದೆ ಎಂದರೆ ಸರಿಯಲ್ಲ. ಮರುದಿನ ಪೊಲೀಸರಿಗೆ ಮಹಜರ ಸ್ಥಳವನ್ನು

**ನಾನೇ ತೋರಿಸಿದ್ದೆ ಎಂದರೆ ಸರಿ. ಆಗ ಚಾಸಾ-2 ಮತ್ತು 3 ಕೂಡ ಇದ್ದರು ಎಂದರೆ ಸರಿಯಲ್ಲ. ದಿನಾಂಕ 12.02.2019ರಂದು ಪುನಃ ಎಲ್ಲಾ ಆರೋಪಿಗಳ ಹೆಸರುಗಳನ್ನು ನಾನು ಪೊಲೀಸರಿಗೆ ತಿಳಿಸಿ ಆರೋಪಿಗಳು ಚಿನ್ನಸ್ವಾಮಿಯನ್ನು ಹೊಡೆದು ಕೊಲೆ ಮಾಡಿರುವುದಾಗಿ ತಿಳಿಸಿದ್ದೆ ಎಂದರೆ ಸರಿಯಲ್ಲ. ಇದೇ ರೀತಿ ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಹೇಳಿಕೆ ಯನ್ನು ನಿಪಿ-3 ಎಂದು ಗುರುತಿಸಿದೆ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**ಪಾಟೀ ಸವಾಲು : 1 ಮತ್ತು 3ನೇ ಆರೋಪಿಗಳ ಪರ ವಕೀಲರಾದ ಶ್ರೀ ಎಂ.ಎಸ್.ರವರಿಂದಃ-**

**5. ಮಹಜರನಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ.**

**ಪಾಟೀ ಸವಾಲು : ಉಳಿದ ಆರೋಪಿಗಳ ಪರ ವಕೀಲರಿಂದಃ- ಇಲ್ಲ**

**ಮರು ವಿಚಾರಣೆಃ- - ಇಲ್ಲ -**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**23.11.2022.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.